ದಿನಾಂಕಃ 19.07.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
ಪ್ರಾ.ಸಾಃ

ಮುಂದುವರೆದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ.ಯುಎಸ್., ವಕೀಲರಿಂದಃ

2. ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ದಾವಾ ಷೆಡ್ಯೂಲ್ ಸ್ವತ್ತಿನ ಖಾತಾ ನಂ.210, 247, 38 ಆಗಿರುತ್ತದೆ. ಹಳೆ ಖಾತಾ ನಂಬರ್ 38 ಅಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತಿನ ವಿಸ್ತೀರ್ಣ - 18 X 40, ಚಕ್ಕುಬಂಧಿ ಪೂ- ನಮ್ಮದೇ ನಿವೇಶನ, ಪ - ದಾಸೇಗೌಡರವರ ಮನೆ, ಉ – ಹುಚ್ಚಮ್ಮನ ಖಾಲಿ ನಿವೇಶನ, ದ - ರಸ್ತೆ ಇದೆ.

3. ಪ್ರಸ್ತುತ ದಾವೆಯನ್ನು ಪ್ರತಿವಾದಿ ತೊಂದರೆ ನೀಡುತ್ತಿರುವ ಬಗ್ಗೆ ಹೂಡಲಾಗಿದೆ. ಪ್ರಸ್ತುತ ದಾವೆಯನ್ನು ಚಿಕ್ಕಮಾದಯ್ಯ, ಮುತ್ತಮ್ಮ, ಶಿವಣ್ಣ, ಮಹಾದೇವರವರ ವಿರುದ್ಧ ಹೂಡಲಾಗಿದೆ.

4. ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ತಿಪ್ಪೇಗೌಡರಿಗೆ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅವರಿಗೆ ಸೇರಿರುತ್ತದೆ. ತಿಪ್ಪೇಗೌಡರವರ ತಂದೆಯ ಹೆಸರು ಗುಬ್ಬೇಗೌಡ. ಗುಬ್ಬೇಗೌಡರವರಿಗೆ ಒಟ್ಟು 6 ಮಕ್ಕಳು. ಅವರುಗಳೆಂದರೆ ತಮ್ಮಯ್ಯ, ಚಿಕ್ಕಣ್ಣ, ಚಿಕ್ಕೋನು, ಪುಟ್ಟ, ಕರೀಗೌಡ ಮತ್ತು ರಾಮು. ಸದರಿ ಅವರು ನನ್ನ ರಕ್ತ ಸಂಬಂಧಿಕರು ಅಂದರೆ ಸರಿ.

5. ತಿಪ್ಪೇಗೌಡ ನಿಮ್ಮ ಅಣ್ಣ ಅಂದರೆ ಸಾಕ್ಷಿ ನನ್ನ ತಾತ. 1ನೇ ಪ್ರತಿವಾದಿಯ ಪತಿಗೆ ನಿಮ್ಮ ತಾತ ತಿಪ್ಪೇಗೌಡರವರ 1990ರಲ್ಲಿ ಕರಾರು ಪತ್ರವನ್ನು ಮಾಡಿಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ಈಗ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

6. ತಿಪ್ಪೇಗೌಡ ಮತ್ತು ಕರೀಗೌಡ ಅಣ್ಣ-ತಮ್ಮಂದಿರು ಅಂದರೆ ಸರಿ. ತಾಃ 03.07.1991ರಲ್ಲಿ ತಿಪ್ಪೇಗೌಡ ಮತ್ತು ಕರೀಗೌಡ ಮಗ ಕರೀಗೌಡ 1ನೇ ಪ್ರತಿವಾದಿ

ಪತಿಗೆ ಕ್ರಯ ಪತ್ರ ಮಾಡಿಕೊಟ್ಟಿದದರು ಅಂದರೆ ನನಗೆ ಗೊತ್ತಿಲ್ಲ ಸದರಿ ವಿಚಾರ ಗೊತ್ತಿದ್ದರೂ ಸಹ ಈಗ ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

7. ತಾಃ 24.02.2010 ರ ನಿಮ್ಮ ಮುಖ್ಯವಿಚಾರಣೆಯಲ್ಲಿ ತಾಃ22.04.2004 ರಲ್ಲಿ ದಾವಾ ಷಡ್ಯೂಲ್ ಸ್ವತ್ತಿಗೆ ತಮ್ಮಯ್ಯರವರು ನನಗೆ ನೋಂದಣಿ ಕ್ರಯಪತ್ರ ಮಾಡಿಕೊಟ್ಟಿದ್ದರು ಎಂದು ಹೇಳಿದ್ದು ಸ್ವತ್ತನ್ನು ಕ್ರಯಕ್ಕೆ ಪಡೆಯುವ ಮೊದಲು ಸದರಿ ಸ್ವತ್ತಿನ ವಿಚಾರವಾಗಿ ಯಾವುದಾದರು ವ್ಯವಹಾರ ನಡೆದಿದೇಯೇ ಎಂದು ತಿಳಿದುಕೊಂಡಿದ್ದೀರಾ ಅಂದರೆ ಸಾಕ್ಷಿ ಯಾವುದೇ ವ್ಯವಹಾರ ಆಗಿರಲಿಲ್ಲ ಎಂದು ನುಡಿಯುತ್ತಾರೆ.

8. ತಾಃ 13.10.2009 ರಲ್ಲಿ ತಮ್ಮಯ್ಯ ಬಿನ್ ತಿಪ್ಪೇಗೌಡರವರಿಗೆ ವಿಭಾಗದ ಮೂಲಕ ಬಂದಿದೆ ಎಂದು ಹೇಳಿದ್ದು, ಸದರಿ ದಾಖಲಾತಿಯನ್ನು ಹಾಜುರುಪಡಿಸಿದ್ದೀರಾ ಅಂದರೆ ಹಾಜರುಪಡಿಸಿದ್ದೇನೆ. ತಮಯ್ಯರವರಿಗೆ ಯಾವುದೇ ವಿಭಾಗವಾಗಿಲ್ಲ ಮತ್ತು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಸಲ್ಲಿಸಿಲ್ಲವಾದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

9. ನಿಪಿ.5 ಮನೆ ಕಟ್ಟಡ ಪರವಾನಿಗೆಯಾಗಿದ್ದು, ನೀವು ಮನೆ ಮನೆ ನಿರ್ಮಾಣ ಮಾಡಿದ್ದೀರಾ ಅಂದರೆ ಸಾಕ್ಷಿ ಮನೆ ಕಟ್ಟಲು ತಕರಾರು ಮಾಡಿದ್ದ, ಯಾವುದೇ ಮನೆ ನಿರ್ಮಾಣ ಮಾಡಿಲ್ಲ.

10. ಈ ಹಂತದಲ್ಲಿ ಸಾಕ್ಷಿಗೆ ಒಂದು ಫೋಟೋ ತೋರಿಸಿದ್ದು, ಅದರಲ್ಲಿ ಕಾಣುವ ಗುಡಿಸಲು ದಾವಾ ಷಡ್ಯೂಲ್ ಸ್ವತ್ತು ಮತ್ತು ಅದರಲ್ಲಿ ಕಾಣುತ್ತಿರುವವರು ಪ್ರತಿವಾದಿ ಅಂದರೆ ಸರಿ. ಸದರಿ ಫೋಟೋವನ್ನು ನಿಡಿ.1 ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಈಗ ಮತ್ತೊಂದು ಫೋಟೋ ತೋರಿಸಿದ್ದು, ಅದರಲ್ಲಿ ಕಾಣುತ್ತಿರುವ ಖಾಲಿ ನಿವೇಶನ ದಾವಾ ಷಡ್ಯೂಲ್ ಸ್ವತ್ತಿನ ಪೂರ್ವಕ್ಕೆ ನನಗೆ ಸೇರಿದ ಖಾಲಿ ನಿವೇಶನ ಅಂದರೆ ಸರಿ. ಸದರಿ ಫೋಟೋವನ್ನು ನಿಡಿ.2 ಎಂದು ಗುರುತಿಸಲಾಯಿತು.

12. 1990 ರಿಂದ ಇಲ್ಲಿಯವರೆಗೂ ಸಹ ಪ್ರತಿವಾದಿ ದಾವಾ ಷಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಕ್ರಮವಾಗಿ ಸದರಿ ಗುಡಿಸಲನ್ನು ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ

13. ಪ್ರತಿವಾದಿ ಸಲ್ಲಿಸಿರುವ ಲಿಖಿತ ತಕರಾರನ್ನು ಓದಿ ತಿಳಿದುಕೊಂಡಿದ್ದೇನೆ. ತಾಃ 30.10.2009 ರಲ್ಲಿ ಪ್ರತಿವಾದಿಗಳು ಗುಡಿಸಲನ್ನು ರಿಪೇರಿ ಮಾಡಿಕೊಳ್ಳುವ ಸಂದರ್ಭದಲ್ಲಿ, ನೀವು ಅವರೊಂದಿಗೆ ಗಲಾಟೆ ಮಾಡಿರುವ ವಿಚಾರವಾಗಿ ನಿಮ್ಮ ವಿರುದ್ಧ ಅಕ್ಕೂರು ಠಾಣೆಯಲ್ಲಿ ದೂರು ದಾಖಲಾಗಿದೆ ಅಂದರೆ ಸಾಕ್ಷಿ ಪ್ರತಿವಾದಿಗಳು ಅಕ್ರಮವಾಗಿ ಗುಡಿಸಲು ಹಾಕಲು ಹೋದಾಗ ಕೇಸ್ ಅಂಡ್ ಕೌಂಟರ್ ಕೇಸು ದಾಖಲಾತಿಯಿತು ಎಂದು ನುಡಿಯುತ್ತಾರೆ.

14. ತಾಃ 23.05.2013 ರಲ್ಲೂ ಸಹ ದಾವಾ ಷಡ್ಯೂಲ್ ಸ್ವತಿ2 ನಲ್ಲಿರುವ ಪ್ರತಿವಾದಿಯ ಗುಡಿಸಲಿಗೆ ಬೆಂಕಿ ಇಡಲು ಹೋದಾಗಲೂ ಸಹ ದೂರು ದಾಖಲಾಗಿದೆ ಅಂದರೆ ಸರಿಯಲ್ಲ.

15. ದಾವಾ ಷಡ್ಯೂಲ್ ಸ್ವತ್ತು ತಿಪ್ಪೇಗೌಡರವರ ಹೆಸರಿನಲ್ಲಿರುವುದು, ಪಂಚಾಯತಿ ಖಾತೆ, ಕಂದಾಯ ರಶೀದಿ ಪರಿಶೀಲಿಸಿ ನಂತರ ಖರೀದಿ ಮಾಡಿದ್ದೇನೆ.

**(1 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)**
**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ
ಚನ್ನಪಟ್ಟಣ.